ಸಿಸಿ ನಂಃ **1717/2021**
**ಚಾಸಾ.7/ಪ್ರಸಾ.6**

**<u>ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ., ಧಾರವಾಡ</u>**

**ಸಾಕ್ಷಿದಾರನ ಹೆಸರುಃ ಗೋಪಾಲ**
**ತಂದೆಯ ಹೆಸರುಃ ಗೊವೀಂದಶೆಟ್ಟಿ**
**ವಯಸ್ಸುಃ 28 ವರ್ಷ**
**ಉದ್ಯೋಗಃ ಡಿ ಆರ್ ಹಾಸನ**
**ವಾಸಸ್ಥಳಃ ಹಾಸನ**

ಸತ್ಯ ಪ್ರತಿಜ್ಞೆಯ ಮೇರೆಗೆ ದಿ. **19.10.2023**

**<u>ಮುಖ್ಯ ವಿಚಾರಣೆಃ ಮಾನ್ಯ ಹಿಸಸಅ ರವರಿಂದ</u>**

ನಾನು ಅಕ್ಟೊಬರ 2017 ರಿಂದ ಅಗಷ್ಟ 4 2018 ವರೆಗೆ ನಾನು ಧಾರವಾಡದ ಪೋಲಿಸ ತರಬೇತಿ ಶಾಲೆಯಲ್ಲಿ ತರಬೇತಿ ಪಡೆದಿರುತ್ತೇನೆ.

ನಾನು ಡಿ ಎ ಆರ್ ಕಾನ್ಸಟೇಬಲ್ ಆಗಿ ಸದರಿ ತರಬೇತಿ ಶಾಲೆಯಲ್ಲಿ ತರಬೇತಿ ಪಡೆಯುತ್ತಿದ್ದೆ. ಸದರಿ ಸಮಯದಲ್ಲಿ ನನ್ನೊಂದಿಗೆ ಚಾಸಾಸ 6,8,9 ಹಾಗೂ ಇತರರ ತರಬೇತಿ ಪಡೆಯುತ್ತಿದ್ದರು. ಸದರಿ ನಮ್ಮ ತರಬೇತಿ ಶಾಲೆಯ ಮುಖ್ಯಸ್ಥರು ಧಾರವಾಡ ಪೋಲಿಸ ವರಿಷ್ಟಾಧಿಕಾರಿಗಳಾದ ಶ್ರಿಮತಿ ಸಂಗೀತಾ ರವರು ಇದ್ದರು. 2 ನೇ ಆರೋಪಿ ಸದರಿ ತರಬೇತಿ ಶಾಲೆಯಲ್ಲಿ ಅಸಿಸ್ಟಂಟ ಡ್ರೀಲ್ ಇನ್ಸಟ್ರಕ್ಟರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ದಿನ ನ್ಯಾಯಾಲಯದ ಮುಂದೆ ಇರುವ 1 ಮತ್ತು 4 ನೇ ಆರೋಪಿತರನ್ನು ಧಾರವಾಡ ಗ್ರಾಮಿಣ ಪೋಲಿಸ ಠಾಣೆಯಲ್ಲಿ ನೊಡಿರುತ್ತೇನೆ.

ಈಗ ಸುಮಾರು 5 ವರ್ಷಗಳ ಹಿಂದೆ ಮೇ ತಿಂಗಳಿನಲ್ಲಿ ನಾನು ತರಬೇತಿ ಶಾಲೆಯಲ್ಲಿ ಇದ್ದಾಗ ನನ್ನ ಮೊಬೈಲ ನಂ.9731155194 ಗೆ ಒಂದು ಅನಾಮಧೇಯ ಕರೆ ಬಂದಿದ್ದು ಅದರ ಕೊನೆಯ ನಾಲ್ಕು ಅಂಕಿ 1722 ಆಗಿದ್ದು

ಉಳಿದ 6 ನಂಬರ ನನಗೆ ನೆನಪಿಲ್ಲ. ಸದರಿ ಸಮಯದಲ್ಲಿ ನಾನು ತರಬೇತಿಯಲ್ಲಿ ಇದುದ್ದರಿಂದ ಸದರಿ ಕರೆಯನ್ನು ನಾನು ಸ್ವಿಕರಿಸಿರಲಿಲ್ಲ. ಚಾಸಾ1, 6,8 ಮತ್ತು 9 ರವರು ಧಾರವಾಡದ ವರಿಪ್ಠಾಧಿಕಾರಿಗಳು ಹೃದಯ ಖಾಯಿಲೆಯಿಂದ ಬಳಲುತ್ತಿದ್ದ ರೋಗಿಗೆ ಸಹಾಯ ಮಾಡಲು ಪ್ರತಿ ಪರಿಕ್ಷಾರ್ಥಿಗಳಿಂದ ರೂ.2,000/- ಸಂಗ್ರಹಿಸುವಂತೆ ಹೇಳಿರುತ್ತಾರೆ ಎಂದು ನನಗೆ ತಿಳಿಸಿದರು. ಸದರಿಯವರಿಗೆ ಆ ಬಗ್ಗೆ ಸದರಿ ವರಿಷ್ಠಾಧಿಕಾರಿಗಳಾದ ಶ್ರಿಮತಿ ಸಂಗೀತಾ ರವರು ಕರೆ ಮಾಡಿ ತಿಳಿಸಿರುತ್ತಾರೆ ಎಂದು ಹೇಳಿದರು. ಹಾಗೂ ಸದರಿ ಹಣ ನೀಡದಿದ್ದರೇ ಸದರಿ ತರಬೇತಿ ಶಾಲೆಯಲ್ಲಿ ಅವರಿಗೆ ತೊಂದರೆ ನೀಡುವಂತೆ ಸೂಚಿಸಿ ಬೆದರಿಕೆ ಹಾಕಿರುತ್ತಾರೆ ಎಂದು ತಿಳಿಸಿದರು.

ಇದಾದ 2 ದಿನಗಳ ನಂತರ ಚಾಸಾ1 ರವರು ಧಾರವಾಡ ಗ್ರಾಮಿಣ ಪೋಲಿಸ ಠಾಣೆಗೆ ಸದರಿ ಪೋಲಿಸ ವರಿಪ್ಠಾಧಿಕಾರಿಗಳು ಧಾರವಾಡ ಶ್ರಿಮತಿ ಸಂಗೀತಾ ರವರು ಎಂದು ಹೇಳಿಕೊಂಡು ಕರೆ ಮಾಡಿದ ವ್ಯಕ್ತಿಯ ವಿರುದ್ದ ದೂರು ದಾಖಲಿಸಿದರು. ಈ ಬಗ್ಗೆ ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸದರಿ ಹೃದಯ ಖಾಯಿಲೆಯಿಂದ ಬಳಲುತ್ತಿದ ವ್ಯಕ್ತಿ ಹೆಸರು ಗಿರಿಜಮ್ಮ ಎಂದು ಸದರಿ ಕರೆಯಲ್ಲಿ ಅನಾಮಧೆಯ ವ್ಯಕ್ತಿ ತಿಳಿಸಿದ್ದರು. ಇದಾದ ನಂತರ ಸದರಿ ನಮ್ಮ ತರಬೇತಿ ಕೇಂದ್ರದಲ್ಲಿ ಎ ಡಿ ಐ ಆಗಿದ್ದ 2 ನೇ ಆರೋಪಿಯ ಹೆಂಡತಿಯಾದ 1 ನೇ ಆರೋಪಿ ಪೋಲಿಸ ವರಿಪ್ಠಾಧಿಕಾರಿಗಳು ಧಾರವಾಡ ಶ್ರಿಮತಿ ಸಂಗೀತಾ ರವರ ಹೆಸರು ಬಳಸಿಕೊಂಡು ಕರೆ ಮಾಡಿ ಹಣ ಸಂಗ್ರಹಿಸಲು ಹೇಳಿದ್ದರು ಎಂಬ ವಿಚಾರ ನನಗೆ ಗೊತ್ತಾಯಿತು. ಸದರಿ ಪ್ರಕರಣದಲ್ಲಿ ನಾಲ್ಕು ಜನ ಭಾಗಿಯಾದ ಬಗ್ಗೆ ನನಗೆ ಗೊತ್ತಾಗಿದ್ದು ಅದರಲ್ಲಿ ಮೂರು ಜನ ಮಹಿಳೆಯರು ಹಾಗೂ ನಮ್ಮ ತರಬೇತಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಎ ಡಿ ಐ ರವರು ಒಬ್ಬರು ಆಗಿದ್ದರು.

ಸದರಿ ಆರೋಪಿತರಿಗೆ ತರಬೇತಿಯಲ್ಲಿ ನಿರತರಾಗಿದ್ದ ಶಿಬಿರಾರ್ಥಿಗಳ ಮಾಹಿತಿ ಯಾವ ರೀತಿ ಗೊತ್ತಾಗಿರುತ್ತದೆ ಎಂದು ನನಗೆ ಗೊತ್ತಾಗಲಿಲ್ಲ. ಸದರಿ ನಾಲ್ಕು ಜನ ಆರೋಪಿತರನ್ನು ಧಾರವಾಡ ಗ್ರಾಮಿಣ ಪೋಲಿಸ ಠಾಣೆಯಲ್ಲಿ ನಮಗೆ ಪೋಲಿಸರು ತೊರಿಸಿದ್ದರು. ಸದರಿಯವರನ್ನು ನೊಡಿದರೇ ಗುರುತಿಸಬಲ್ಲೆ. ಸದರಿ ದಿನ ಪೋಲಿಸ ಠಾಣೆಯಲ್ಲಿ ನಮಗೆ ನಾಲ್ಕು ಜನರನ್ನು ತೋರಿಸಿದ್ದು ಅ ಪೈಕಿ ಈಗ ಮೂರು ಜನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ ಸಾಕ್ಷಿ ಅವರನ್ನು ನೊಡಿ ಗುರುತಿಸಿರುತ್ತಾರೆ. ಇನ್ನೊರ್ವ ಆರೋಪಿಯನ್ನು ನೊಡಿದರೇ ಗುರುತಿಸಬಲ್ಲೆ. (3 ನೇ ಆರೋಪಿ ತಿರಿಕೊಂಡಿರುತ್ತಾರೆ.)

ದೂರು ನೀಡಿದ 15-20 ದಿನಗಳ ನಂತರ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**( ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ವಿನಂತಿಸುತ್ತಾರೆ. ಸಾಕ್ಷಿ ಹೇಳಿದ ಈ ಮೇಲಿನ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳನ್ನು ಪರಿಶೀಲಿಸಿದಾಗ ಸಾಕ್ಷಿಯ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳಿಗೆ ವ್ಯತಿರಿಕ್ತ ಇದ್ದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಪಾಟೀ ಸವಾಲುಃ ಮಾನ್ಯ ಪ್ರಭಾರ ಹಿಸಸ ರವರಿಂದ**

1. ದಿಃ 18.05.2018 ರಂದು ಮದ್ಯಾಹ್ನ 12.33 ಗಂಟೆ ಸಮಯದಲ್ಲಿ ನನ್ನ ಮೊಬೈಲಗೆ ಮೊಬೈಲ ನಂ.9538291722 ನೇದ್ದರಿಂದ ಕರೆ ಬಂದಿತ್ತು ಎಂದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೃದಯ ಖಾಯಿಲೆಯಿಂದ ಬಳಲುತ್ತಿದ್ದ ರೊಗಿಯಾದ ಗಿರಿಜವ್ವ ನಾಗಶೆಟ್ಟಿ ಎಂಬ ಮಹಿಳೆಗೆ

ಹಣದ ಅವಶ್ಯಕತೇ ಇದೆ ಎಂದು ಚಾಸಾ1 , 6, 8 ರಿಂದ 9 ರವರಿಗೆ ಕರೆ ಬಂದಿತ್ತು ಎಂದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. 1 ಮತ್ತು 2 ನೇ ಆರೋಪಿತರನ್ನು ಬಿಟ್ಟು ಉಳಿದ ಎರಡು ಆರೋಪಿ ಮಹಿಳೆಯರ ಹೆಸರು ಗಿರಿಜಾ ಯಮನಪ್ಪ ನಾಗಶೆಟ್ಟಿ ಹಾಗೂ ಕೃಷ್ಣಮ್ಮ ಚಂದ್ರಶೇಖರ ಸೊಮರೆಡ್ಡಿ ಎಂದು ನನಗೆ ಗೊತ್ತಾಯಿತು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಆರೋಪಿತರು ಶಿಬಿರಾರ್ಥಿಗಳಿಂದ ಅಕ್ರಮವಾಗಿ ಈ ಮೇಲೆ ಹೇಳಿದ ರೋಗಿಗೆ ಹಣದ ಅವಶ್ಯಕತೆ ಇದೆ ಎಂದು ನಮ್ಮಿಂದ ಹಣ ಪಡೆಯುವುದಕ್ಕಾಗಿ ಸದರಿ 9538291722 ನಂಬರನ ಸಿಮನ್ನು ಖರೀದಿಸಿದ್ದಾಗಿ ನನಗೆ ಗೊತ್ತಾಯಿತು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಸಿಮ್ ನ್ನು 3 ನೇ ಆರೋಪಿಯಾದ ಗಿರಿಜವ್ವ ರವರ ಹೆಸರಿನಲ್ಲಿ ಖರೀದಿಸಲಾಗಿತ್ತು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಶಿಬಿರಾರ್ಥಿಗಳ ಹೆಸರಿನ ಪಟ್ಟಿಯನ್ನು 2 ನೇ ಆರೋಪಿಯಿಂದ 1 ನೇ ಆರೋಪಿ ಪಡೆದು ಕರೆ ಮಾಡಿದ್ದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ಸದರಿ ಆರೋಪಿತರು ಬಳಸಿದ ಸಿಮ್ ನಂಬರದ ಆಧಾರದ ಮೇಲೆ ಪೋಲಿಸರು ಸದರಿ 4 ಜನ ಆರೋಪಿತರನ್ನು ಪತ್ತೆ ಹಚ್ಚಿದ ವಿಷಯ ನನಗೆ ಗುತ್ತಾಯಿತು ಎಂದರೆ ಸರಿ.

<u>**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.**</u>

(ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ನೀಡಲಾಯಿತು)

(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).
ಓ ಹೇ ಕೇ ಸರಿ ಅದೆ,

**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.